(ಗೊಂದಲ)

ಅಧ್ಯಕ್ಷರು.—ತಾವು ಎಲ್ಲರೂ ಕುಳಿತುಕೊಳ್ಳಿ.—ರೂಲಿಂಗ್ ಕೊಡಬೇಕು, ಕೊಟ್ಟಿದ್ದೇನೆ...

ಶ್ರೀ ಸಿ. ಬೈರೇಗೌಡ.—ತಮ್ಮ ತೀರ್ಪನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಇನ್ನು ಮುಂದೆ ಯಾರಾದರೂ ಸದಸ್ಯರು ಈ ರೀತಿ ಕೇಳಿದರೆ, ಇದನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ತಾವು ಅಧ್ಯಕ್ಷರು ಇದ್ದೀರಿ.....

ಅಧ್ಯಕ್ಷರು.— ತಾವು ಕುಳಿತುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ನಾನು ಈ ಬಗ್ಗೆ ಈಗಾಗಲೇ ರೂಲಿಂಗನ್ನು ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ.—ನಾನು ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದಿಲ್ಲ.

ಅಧ್ಯಕ್ಷರು.—ಆಗಲಿ, ದಯವಿಟ್ಟು ಕೂತುಕೊಳ್ಳಿ.

ರಾಣೆಬೆನ್ನೂರು ಹಾಗೂ ಹಿರೇಕೆರೂರು ತಾಲ್ಲೂಕುಗಳ ಗ್ರಾಮಸ್ಥರ ಮೇಲೆ ಕರಡಿ ಆಕ್ರಮಣ ಮಾಡಿರುವ ಬಗ್ಗೆ

ಶ್ರೀ ಕೆ.ಬಿ. ಕೋಳಿವಾಡ.—ರಾಣೆಬೆನ್ನೂರು ಹಾಗೂ ಹಿರೇಕೆರೂರ್ ತಾಲ್ಲೂಕುಗಳ ಗ್ರಾಮಸ್ಥರ ಮೇಲೆ ಕರಡಿ ಆಕ್ರಮಣದ ಬಗ್ಗೆ ನಾನು ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎ. ಜೆ. ವಿಜಯ (ರಾಜ್ಯ ಅರಣ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಒಂದು ಹೇಳಿಕೆಯನ್ನು ನೀಡುತ್ತೇನೆ. ಅದು ಈ ರೀತಿ ಇದೆ:

೧೬-೭-೮೫ರಂದು ವರದಿ ಮಾಡಿರುವಂತೆ ಸುಮಾರು ೧೧-೩೦ ರಲ್ಲಿ ಒಂದು ಕರಡಿಯು ಮಕನೂರ್ ಹಳ್ಳಿಯ ಮೂರು ವ್ಯಕ್ತಿಗಳ ಮೇಲೆ ಆವರು ತಮ್ಮ ತೋಟಕ್ಕೆ ನೀರು ತರಲು ಹೋಗಿದ್ದಾಗ ದಾಳಿ ನಡೆಸಿತು. ಆವರಲ್ಲಿ ಒಬ್ಬನು ಪಾರಾಗಿ ಉಳಿದ ಇಬ್ಬರಿಗೆ ಕರಡಿಯಿಂದ ಗಾಯ ಉಂಟಾಯಿತು ನಂತರದಲ್ಲಿ ಆ ಕರಡಿಯು ಪುನಃ ಒಬ್ಬನನ್ನು ಗಾಯಗೊಳಿಸಿತು. ಇದನ್ನು ನೋಡಿದ ಹಳ್ಳಿಯವರು ಸುಮಾರು ೫೦ ರಿಂದ ೬೦ ಜನರೊಂದಿಗೆ ದೊಣ್ಣೆ ಹಾಗೂ ಕುಡುಗೋಲಿನೊಂದಿಗೆ ಬಂದು ಕರಡಿಯನ್ನು ಬಯಲಿಗೆ ಓಡಿಸಿದರು. ನಂತರ ಆ ಕರಡಿಯು ಒಂದು ಪಂಪ್ ಹೌಸ್‌ನೊಳಗೆ ಸೇರಿಕೊಂಡಿತು. ಪಂಪ್ ಹೌಸ್ ಒಳಗಡೆ ಕರಡಿಯನ್ನು ನೋಡಿದ ಜನರು ಆರಕ್ಷಕ ಸಿಬ್ಬಂದಿ ಸಹಾಯ ಬೇಡಿದಾಗ ಆರಕ್ಷಕ ಉಪ ನಿರೀಕ್ಷರು ಒಂದು ಸ್ಥಳೀಯ ಆಜಮಾಯಿಸಿ ಕರಡಿಯನ್ನು ಗುಂಡು ಹಾಕಿ ಕೊಂದರು. ಮೃತ ಪಟ್ಟ ಕರಡಿಯ ದೇಹವನ್ನು ವಲಯ ಅರಣ್ಯ ಅಧಿಕಾರಿ ವನ್ಯ ಜೀವಿ ಸಂರಕ್ಷಣೆ ರಾಣೆಬೆನ್ನೂರು ಅವರ ವತಕ್ಕೆ ಒಪ್ಪಿಸಲಾಯಿತು. ಇಂತಹ ಯಾವುದೇ ಪ್ರಕರಣವು ಇದುವರೆಗೆ ಹಿರೇಕೆರೂರ್ ತಾಲ್ಲೂಕ್‌ನಿಂದ ಬಂದಿರುವುದಿಲ್ಲ. ಪರಿಹಾರಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆಜ್ಞೆ ಪ್ರಕಾರ ವನ್ಯ ಪ್ರಾಣಿಯಿಂದ ಮರಣ ಹೊಂದಿದ ವ್ಯಕ್ತಿಗೆ ಆಥವಾ ಶಾಶ್ವತ ಅಂಗ ವಿಕಲತೆಗೆ ಪರಿಹಾರ ಕೊಡಲಾಗುತ್ತದೆ. ಮೇಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಯಾವುದೇ ಪರಿಹಾರ ಕೊಟ್ಟಿರುವುದಿಲ್ಲ. ಸರ್ಕಾರಿ ಆಜ್ಞೆ ನಂ. ಎಫ್‌ಎಫ್‌ಡಿ-೫೫ ಎಫ್‌ಡಬ್ಲ್ಯೂಎಲ್-೮೧ ದಿನಾಂಕ ೧೫-೧೧-೮೧ರ ಪ್ರಕಾರ ಪರಿಹಾರ ಧನವನ್ನು ಅಂಗವಿಕಲತೆಯಾದ ಪಕ್ಷದಲ್ಲಿ ಆಥವಾ ಮರಣ ಹೊಂದಿದಲ್ಲಿ ಮಾತ್ರ ಕೊಡಬಹುದು. ಈ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಶಾಶ್ವತ ಅಂಗವಿಕಲತೆಯ ಬಗ್ಗೆ ಪ್ರಮಾಣ ಪತ್ರವನ್ನು ಆಥವಾ ಒಂದು ಮರಣೋತ್ತರ ಪರೀಕ್ಷಾ ವರದಿ ಪ್ರಮಾಣ ಪತ್ರವನ್ನು ಪಡೆಯುವುದು ಅವಶ್ಯಕ.

ಮೇಲ್ಕಂಡ ಸರ್ಕಾರಿ ಆಜ್ಞೆಯು ಚಾಕಟ್ಟಿನಲ್ಲಿ ಹಾಲಿ ಪ್ರಕರಣದಲ್ಲಿ ಪರಿಹಾರವನ್ನು ಕೊಡುವ ಬಗ್ಗೆ ಪರಿಶೀಲಿಸಲಾಗುತ್ತದೆ.

ಶ್ರೀ ಕೆ.ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಾರೀಖು ೧೬-೭-೮೫ ರಂದು ತಯಾರಾದ ಒಂದು ವರದಿಯನ್ನು ಈ ಸಭೆಯ ಮುಂದೆ ಒದಿ ಹೇಳಿದರು. ಆ ದಿವಸ ಪೂರ್ವದಲ್ಲಿ ರಾಣಿಬೆನ್ನೂರಿನ ತಿಮ್ಮೇನಹಳಿ ಗ್ರಾಮದಲ್ಲಿ ಕರಡಿ ಬಂದು ಒಬ್ಬ ಮನುಷ್ಯನ ಕಣ್ಣನ್ನೇ ಕಿತ್ತುಹಾಕಿರತಕ್ಕಂಥಾದ್ದರ ಬಗ್ಗೆ ವರದಿ ಇದರಲ್ಲಿ ಬಂದಿಲ್ಲದೆ ಇರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಇದರಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ ಸರ್ಕಾರದ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಡುವುದರಲ್ಲಿ ಅವರು ವಿಫಲರಾಗಿದ್ದಾರೆ ಎಂದು ಕಾಣುತ್ತದೆ. ನಾನು ಇದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಈ ವನ್ಯ ಮೃಗಗಳು ಹಳ್ಳಿಗಳಲ್ಲಿ ಬಂದು ಧಾಳಿ ಮಾಡಿ ಏನು ತೊಂದರೆ ಕೊಡುತ್ತಾ ಇವೆಯೋ ಅವರ ಬಗ್ಗೆ ಅವರು ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಏನ್ನುವುದನ್ನು ತಿಳಿಸಬೇಕು. ಮತ್ತು ಈ ವನ್ಯ ಮೃಗಗಳಿಂದ ತೊಂದರೆ ಪಡತಕ್ಕಂಥಾ ಅನೇಕ ಬಡವರು ಇರುವುದರಿಂದ ಸಂಪೂರ್ಣವಾಗಿ ಅವರು ಅಂಗವಿಕಲರಾರಲಿಕ್ಕಿಲ್ಲ. ಆದರೆ ಅವರು ಶುಶ್ರೂಷೆ ಪಡೆದುಕೊಳ್ಳುವುದಕ್ಕೆ ಸಾವಿರಾರು ರೂಪಾಯಿಗಳನ್ನು ವಿಚ್ರ್ಯಮಾಡುತ್ತಿದ್ದಾರೆ. ಇದಕ್ಕೆ ತಾವೇನಾದರೂ ಕೂಡ ಪರಿಹಾರ ರೂಪದಲ್ಲಿ ಅವರಿಗೆ ಕೊಡುವ ಹಾಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದಂಥ ಮೊದಲನೇ ಕ್ಲಾರಿಫಿಕೇಷನ್ ಬಗ್ಗೆ ಹೇಳಬೇಕಾದರೆ ಈ ಪ್ರಕರಣದ ಪೂರ್ವದಲ್ಲಿ ಒಬ್ಬ ವ್ಯಕ್ತಿ ಮೇಲೆ ಅದು ದಾಳಿ ಮಾಡಿರುವುದರಿಂದ ಆ ವ್ಯಕ್ತಿಯು ಕಣ್ಣು ಹೋಗಿದೆ ಅದಕ್ಕೆ ಪರಿಹಾರ ಕೊಟ್ಟಿಲ್ಲ, ಅದು ಈ ವರದಿಯಲ್ಲಿ ಬಂದಿಲ್ಲ ಎಂದು ಏನು ಹೇಳಿದ್ದಾರೆ ಅವರ ಬಗ್ಗೆ ಆ ಕೇಸಿನಲ್ಲಿ ಏನು ಇದೆ ಅನುವುದರ ಬಗ್ಗೆ ವರದಿ ತರಿಸಿಕೊಂಡು ಪರಿಹಾರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಎರಡನೇ ಕ್ಲಾರಿಫಿಕೇಷನ್ ಬಗ್ಗೆ ಹೇಳಬೇಕಾದರೆ ಈ ಪ್ರಾಣಿಗಳು ಊರಿಗೆ ಬರದ ಹಾಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಕೇಳಿದ್ದಾರೆ. ಆ ಬಗ್ಗೆ ಹೇಳಬೇಕಾದರೆ ಯಾರೇ ಆಗಲಿ ಯಾವ ಪ್ರಾಣಿಯನ್ನೂ ಕಾಯುವುದಕ್ಕೆ ಸಾಧ್ಯವಿಲ್ಲ. ಅದು ಹೇಗಾದರೂ ಮಾಡಿಕೊಂಡು ಊರಿಗೇ ಬಂದೇ ಬರುತ್ತದೆ. ಕೆಲವು ಸಂದರ್ಭಗಳಲ್ಲಿ ಕಾಯುವುದಕ್ಕೆ ಕಷ್ಟವಾಗುತ್ತದೆ. ಯಾವ ವ್ಯಕ್ತಿಗಾದರೂ ಅದರಿಂದ ತೊಂದರೆಯಾಗಿದ್ದ ಪಕ್ಷದಲ್ಲಿ ಅಂಗವಿಕಲರಾಗಿದ್ದ ಪಕ್ಷದಲ್ಲಿ ೧೩-೧೧-೧೯೮೧ ರ ಸರ್ಕಾರೀ ಆಜ್ಞೆ ಪ್ರಕಾರ ಪರಿಹಾರ ಧನವನ್ನು ಕೊಡಲಿಕ್ಕೆ ಸಾಧ್ಯತೆ ಇದೆ ಆದರೆ ಸಣ್ಣ ಪುಟ್ಟ ಪಾಯಿಲೆಗಳಿಗೆ ಪರಿಹಾರ ಧನ ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ ಮಾನ್ಯ ಸದಸ್ಯರು ಈಗ ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಕೆ.ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ಈ ವನ್ಯ ಮೃಗಗಳು ಹಳ್ಳಿಗಳಲ್ಲಿ ಬರುವುದಕ್ಕೆ ಬೇರೆ ಕಾರಣ ಉಂಟು ಏತಕ್ಕೆಂದರೆ ಸರ್ಕಾರೀ ಆಜ್ಞೆ ಪ್ರಕಾರ ಅವರು ಹಳ್ಳಿಗಳಿಗೆ ಬಲ್ಬ್ ಕೊಡಬೇಕು. ಆ ರೀತಿ ಬಲ್ಬ್ ಕೊಡಬೇಕಾದರೆ ಅಸಿಸ್ಟೆಂಟ್ ಕಮೀಷನರ್‌ಗೆ ಬರೆಯಬೇಕು. ಅನಂತರ ಇಂಡೆಂಟ್ ಕಳುಹಿಸಿ ತರಿಸಿಕೊಳ್ಳಬೇಕು. ಆ ಬಲ್ಬ್ ಬರುವವರೆಗೆ ಆ ಊರಿನಲ್ಲಿ ರಾತ್ರಿಯಲ್ಲಾ ಕತ್ತಲು ಇರುತ್ತದೆ, ಬಲ್ಬ್ ಇಲ್ಲದೇ ಕತ್ತಲೇ ಇರುವುದರಿಂದ ಈ ವನ್ಯ ಮೃಗಗಳು ಹಳ್ಳಿಗಳಿಗೆ ಬರುತ್ತವೆ. ಇದು ಮುಖ್ಯವಾದ ಕಾರಣ ಆದುದರಿಂದ ಈ ಕತ್ತಲೆಯನ್ನು ಹೋಗಲಾಡಿಸುವುದಕ್ಕೆ ಆದಷ್ಟು ಬೇಗ ಬಲ್ಬ್‌ಗಳನ್ನು ತರಿಸಿಕೊಡುವ ಹಾಗೆ ಮಾಡಿದರೆ ಈ ವನ್ಯ ಮೃಗಗಳು ಹಳ್ಳಿಗಳಿಗೆ ಬರುವುದು ತಪ್ಪುತ್ತದೆ. ಈ ಕತ್ತಲೆಯನ್ನು ಹೋಗಲಾಡಿಸುವ ಹಾಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ.ಎ. ಜೀವಿಜಯ.—ಕತ್ತಲೆಯನ್ನು ಹೋಗಲಾಡಿಸುವುದಕ್ಕೆ ನಾನು ಹೇಳುತ್ತೇನೆ.